



'ಈ ಪ್ರಕಾರದಲ್ಲಿ ಯಶಸ್ವಿಯಾಗಲು ನಮ್ಮ ಮನೋಭಾವದಲ್ಲಿ ಬದಲಾವಣೆ ಅಗತ್ಯ. ನಮ್ಮ ಮನೋಧರ್ಮವನ್ನು ಅರಿತು ಸ್ವತಂತ್ರವಾಗಿ ಸಂಗೀತ ಮಾಡಬೇಕು. ಕೇಳುಗರು ವಿಡಿಯೊ ಮಾಡಲು ಇಷ್ಟಪಡುತ್ತಾರೆ. ಆಗ ಅವರಿಗೆ ಸುಮಧುರ ಸಂಗೀತ ಬೇಕು. ತುಳಸಿ ಹಾಡು ಯಶಸ್ವಿಯಾಗಲು ಜನರ ಮೂಡ್‌ಗೆ, ಆಲೋಚನೆಗಳಿಗೆ ತಕ್ಕಂತೆ ಈ ಹಾಡನ್ನು ನಿರೂಪಿಸಿ, ನಿರ್ದೇಶಿಸಿ ಹಾಡಿರುವುದೇ ಕಾರಣ' ಎನ್ನುತ್ತಾರೆ ಸುಮೇಧ.

'ನಾನು ಫ್ಯೂಷನ್ ಹಾಗೂ ಜಾನಪದ ಸಂಗೀತದ ಎಳೆಗಳನ್ನು ಇಟ್ಟುಕೊಂಡು ಸಂಗೀತ ಮಾಡ್ತೀನಿ. ಇಲ್ಲಿ ಆಧುನಿಕ ಮನೋಭಾವನೆ ಜೊತೆಗೆ ದೇಸೀ ಟಚ್ ಕೊಟ್ಟು ಮಾಡುವ ಸಂಗೀತ. ಎಲ್ಲರಿಗೂ ಇಷ್ಟವಾಗುತ್ತದೆ. ಕನ್ನಡದಲ್ಲಿ ದೇಸೀ ಸಂಗೀತದ ಕೊರತೆ ಇದೆ, ಏನು ಹೊಸದು ಸಿಕ್ಕಿದ್ರೂ ಯುವಜನರು ಸ್ವೀಕರಿಸ್ತಾರೆ. ಕೇಳುಗರ ಪ್ರತಿಕ್ರಿಯೆಯೂ ಚೆನ್ನಾಗಿದೆ. ಇದೇ ನನ್ನ ಸಂಗೀತಕ್ಕೆ ಪ್ರೇರಣೆಯೂ ಆಗಿದೆ' ಎನ್ನುವುದು ಸುಮೇಧ ಅವರ ಮನದಾಳದ ಮಾತು.

'ತೀರ ಹುಡುಕಿ ನೀರ ನೋಡಿ...' ತುಳಸಿ ಹಾಡಿನ ಲಿಂಕ್: https://youtu.be/Y8ZApXcnhy4?si=iSWLRF0RFRaWAEE7

## ಯುವಮನಸ್ಸುಗಳ ಆಕರ್ಷಣೆ

'ಇಂಡೀ ಸಂಗೀತದ ಅನಾವರಣಕ್ಕೆ ಈಗ ಸ್ವರ್ಣಯುಗ ಎನ್ನಬಹುದು' ಎನ್ನುವ ಈ ಗಾಯಕ, 'ಯುವ ಮನಸ್ಸುಗಳನ್ನು ಸೆಳೆಯಲು ಇಂಡೀ ಸಂಗೀತ ಪರಿಣಾಮಕಾರಿ. ಸದ್ಯ ಕೆಲವೇ ಕೆಲವು ಬೆರಳೆಣಿಕೆಯಷ್ಟು ಯುವ ಕಲಾವಿದರಷ್ಟೇ ಇಂಡೀ ಸಂಗೀತ ಹಾಡುತ್ತಿದ್ದರೂ ಇದು ಬಹುಸಂಖ್ಯೆಯ ಯುವಜನರನ್ನು ತಟ್ಟಿದೆ' ಎಂದು ಹೇಳುತ್ತಾರೆ ಯುವ ಗಾಯಕ ಸಿದ್ಧಾರ್ಥ ಬೆಳ್ಮಣ್.

ಮೂಲತಃ ಉಡುಪಿ ಜಿಲ್ಲೆಯ ಕಾರ್ಕಳದವರಾದ ಸಿದ್ಧಾರ್ಥ, ಹಿಂದೂಸ್ತಾನೀ ಸಂಗೀತದ ಮೂರೂ ಸ್ಥಾಯಿಗಳಲ್ಲಿ ನಿರರ್ಗಳವಾಗಿ ಹಾಡುತ್ತಾರೆ. ಇಂಡೀ ಸಂಗೀತದತ್ತ ಅದಮ್ಯ ಆಸಕ್ತಿ ಬೆಳೆಸಿಕೊಂಡ ಅಪರೂಪದ ಗಾಯಕರಿವರು.



ಸಿದ್ಧಾರ್ಥ ಬೆಳ್ಮಣ್

ಖ್ಯಾತಿಯ ಉತ್ತುಂಗಕ್ಕೇರಿದೆ. ಹಿಂದಿಯಲ್ಲಿ ಪೆಂಟಗಾನ್, ಇಂಡಿಯನ್ ಓಷನ್, ಪರಿಕ್ರಮ, ಯುಫೋರಿಯಾ, ತಮಿಳಿನಲ್ಲಿ ಶಾನ್ ಅಂಡ್ ಫ್ರೆಂಡ್ಸ್, ಪ್ರದೀಪ್ ಕುಮಾರ್ ಮುಂತಾದವರು ಮುಂಚೂಣಿಯ ಇಂಡೀ ಸಂಗೀತಗಾರರು, ಮಲಯಾಳಂನಲ್ಲಿ 'ಅವಿಯಲ್' ಆಲ್ಬಂ ಯಶಸ್ಸು ಗಳಿಸಿದೆ. ರಘು ದೀಕ್ಷಿತ್ ಸ್ವತಂತ್ರ ಸಂಗೀತಕ್ಕೆ ಹೊಸ ಭಾಷ್ಯವನ್ನೇ ಬರೆದಿದ್ದಾರೆ.

ಯುವಕಲಾವಿದರು ಅವರವರ ಭಾವನೆಗಳನ್ನು ತಮ್ಮ ತಮ್ಮ ಮನೋಧರ್ಮಕ್ಕೆ ತಕ್ಕಂತೆ ಸಂಗೀತದಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಈಗ ಕನ್ನಡದಲ್ಲಿ ಮತ್ತೆ ಇಂಡೀ ಸಂಗೀತ ಚಿಗುರುತ್ತಿದೆ.

### ಇತಿಹಾಸವೂ ಇದೆ...

ಇಂಡೀ ಸಂಗೀತಕ್ಕೆ ಸುದೀರ್ಘ ಇತಿಹಾಸವೂ ಇದೆ. ಸರಿಸುಮಾರು 60ರ ದಶಕಗಳಲ್ಲಿ 'ದಿ ಬೀಚ್ ಬಾಯ್ಸ್', ಬಾಬ್ ಡೈಲನ್, ನಿಕ್ ಡ್ರೇಕ್‌ನಂತಹ ಕಲಾವಿದರ ತಂಡ ವಿದೇಶದಲ್ಲಿ ಇಂಡೀ ಸಂಗೀತವನ್ನು ಚಾಲ್ತಿಗೆ ತಂದಿತು. ಈ ಇಂಡೀ ಪ್ರವರ್ತಕರು ಭವಿಷ್ಯದ ಪೀಳಿಗೆಯ ಸಂಗೀತಗಾರರಿಗೆ ಸ್ಫೂರ್ತಿ ನೀಡುವ ಸಲುವಾಗಿ ಹೊಸ ಸಂಗೀತ ಪ್ರಕಾರಕ್ಕೆ ನಾಂದಿ ಹಾಡಿದರು. 70–80ರ ದಶಕಗಳಲ್ಲಿ ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ಇಂಡೀ ಸಂಗೀತ ಒಂದು ವಿಶಿಷ್ಟ ಪ್ರಕಾರವಾಗಿ ಹೊರಹೊಮ್ಮಿತು. 'ದಿ ಸ್ಮಿತ್ಸ್', 'ದಿ ಬಜ್‌ಕಾಕ್ಸ್', 'ರೆಮ್'ನಂತಹ ಬ್ಯಾಂಡ್‌ಗಳು ಮುಂಚೂಣಿಯಲ್ಲಿದ್ದವು. ಅಲ್ಲದೆ ಈ ಯುಗದ ಇಂಡೀ ಧ್ವನಿಯನ್ನು ನವೀನ ಸಂಗೀತದೊಂದಿಗೆ ಅಭಿವ್ಯಕ್ತಿಸಿದವು.

'ದಿ ಸ್ಮಿತ್ಸ್' ಹೊಸ ಪೀಳಿಗೆಯ ಕಲಾವಿದರಿಗೆ ಸ್ಫೂರ್ತಿಯನ್ನೂ ನೀಡಿತು. 1990ರ ದಶಕದಲ್ಲಿ ಇಂಗ್ಲೆಂಡ್‌ನಲ್ಲಿ 'ಬ್ರಿಟ್‌ಪಾಪ್' ಇಂಡೀ ಸಂಗೀತ ಭಾರೀ ಜನಪ್ರಿಯವೂ ಆಯಿತು. 2000ರ ದಶಕದಲ್ಲಿ ಇಂಡೀ ಸಂಗೀತ ಮುಖ್ಯವಾಹಿನಿಗೆ ಬಂತು. ಲಾಸ್ ವೇಗಾಸ್‌ನಲ್ಲಿ ರೂಪುಗೊಂಡ 'ದಿ ಕಿಲ್ಲರ್ಸ್' ಆಲ್ಬಂ ಅಪಾರ ಜನಪ್ರಿಯತೆ ಗಳಿಸಿತು. ಪ್ರಪಂಚದಾದ್ಯಂತ 28 ಮಿಲಿಯನ್‌ಗಿಂತಲೂ ಹೆಚ್ಚು ಮಾರಾಟವಾಗಿ ದಾಖಲೆ ನಿರ್ಮಿಸಿತು. 2006ರಲ್ಲಿ ಬಿಡುಗಡೆಯಾದ ಆರ್ಕ್ಟಿಕ್ ಮಂಕೀಸ್‌ನ ಚೊಚ್ಚಲ ಆಲ್ಬಂ 'ವಾಟೆವರ್ ಪೀಪಲ್ ಸೇ ಐ ಆಮ್, ದಟ್ಸ್ ವಾಟ್ ಐ ಆಮ್ ನಾಟ್' ಕೂಡ ಯಶಸ್ಸಿನ ಉತ್ತುಂಗಕ್ಕೇರಿತು. ಇಂಡೀ ಸಂಗೀತದ ಪ್ರಭಾವ ಇಂದಿಗೂ ವಿದೇಶಗಳಲ್ಲಿ ಪ್ರಬಲವಾಗಿದೆ. ಕಲಾವಿದರು ಮಿತಿಗಳನ್ನು ಮೀರಿ ಹೊಸ ಶೈಲಿಯಲ್ಲಿ ಸಂಗೀತ ಪ್ರಯೋಗ ಮಾಡುವುದನ್ನು ಮುಂದುವರೆಸಿದ್ದಾರೆ. ನಮ್ಮ ದೇಶದಲ್ಲಿ ಬಾಲಿವುಡ್‌ನಲ್ಲಿ 'ಇಂಡೀ' ಹೆಚ್ಚು ಖ್ಯಾತಿ ಗಳಿಸಿದೆ. ಕನ್ನಡದ ಮಟ್ಟಿಗೆ ಈಗಿನ ಪೀಳಿಗೆಯ ಯುವಕಲಾವಿದರು ಸಂಚಲನ ಮೂಡಿಸುತ್ತಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in